ನಿಯಮ ೩೫ಳಿರ ಮೇರೆಗೆ

೧) ಸವದತ್ತಿ ತಾಲ್ಲೂಕು ನವಿಲು ತೀರ್ಥದಲ್ಲಿ ಕನ್ನಡ ಪ್ರಾಥಮಿಕ ಶಾಲಾ ಕಟ್ಟಡ ಏಥಿಲ ಗೊಂಡಿರುವುದು.

ಶ್ರೀ ಶಿವಾನಂದ ಎಚ್. ಕೌಜಲಗಿ. —ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಸಂಗೊಳ್ಳಿ ಪುನರ್ವಸತಿ ಗ್ರಾಮದಲ್ಲಿ ಕಾರ್ಯ ನಿರ್ವಾಹಕ ಅಭಿಯಂತರರು ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ ವಿಭಾಗ ನಂ. ೨ ನವಿಲು ತೀರ್ಥ ತಾ॥ ಸವದತ್ತಿ ಜಿಲ್ಲೆ॥ ಬೆಳಗಾವಿ ಇವರು ಕನ್ನಡ ಪ್ರಾಥಮಿಕ ಶಾಲೆಯ ಕಟ್ಟಡವನ್ನು ಈಗ ೧೦–೧೨ ವರ್ಷ ಹಿಂದೆ ಕಟ್ಟಿರುತ್ತಾರೆ.

ಆ ಕಟ್ಟಡವನ್ನು ಗುತ್ತಿಗೆದಾರರು ಒಳ್ಳೆಯ ಗುಣಮಟ್ಟದಲ್ಲಿ ಕಟ್ಟದೇ ಇದ್ದುದರಿಂದ ಅದು ಕ್ರ್ಯಾಕ್ (ಸೀಳು) ಸ್ಲ್ಯಾಬು ಸಹ ಕುಸಿದು ಇರುತ್ತದೆ. ಈ ಕಟ್ಟಡವನ್ನು ಸರಿಯಾಗಿ ಕಟ್ಟದೇ ಇದ್ದ ಕಾರಣ, ನೀರಾವರಿ ಇಲಾಖೆಯ ಇಂಜಿನಿಯರ್ ಇದರ ಬಗ್ಗೆ ಪೂರ್ಣ ಚಿವಕಾಶಿ ಮಾಡಲು ಕಳೆದ ೧೦ ವರ್ಷಗಳ ಹಿಂದೆಯೇ ಪ್ರಯತ್ನ ಕಳುಹಿಸಿಕೊಟ್ಟಿರುತ್ತಾರೆ. ಮತ್ತು ಈ ಕಟ್ಟಡವನ್ನು ನೀರಾವರಿ ಇಲಾಖೆಯವರು ಒಳ್ಳೆಯ ರೀತಿಯಿಂದ ಕಟ್ಟಡ ಕಟ್ಟದೇ ಇದ್ದ ಕಾರಣ ಈ ಕಟ್ಟಡವನ್ನು ಶಿಕ್ಷಣ ಇಲಾಖೆಯವರಿಗೆ ಹಸ್ತಾಂತರ ಸಹ ಮಾಡಿರುವುದಿಲ್ಲಾ. ಆದರೆ ಕಳೆದ ಹತ್ತು ವರ್ಷಗಳಿಂದ ಇನ್ನೂವರೆಗೆ ವಿಜಿಲೆನ್ಸ್‌ದವರಿಂದ ಯಾವುದೇ ಎನ್‌ಕ್ವೈರಿ ಆಗಿ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಇಲ್ಲಿಯವರೆಗೂ ಆ ಶಾಲೆಯು ಉಪಯೋಗಕ್ಕೆ ಕೂಡಾ ಬರಲಿಲ್ಲ.

ಆದಕಾರಣ, ಕೂಡಲೇ ವಿಜಿಲೆನ್ಸ್‌ನವರ ಅಗತ್ಯ ಬೀಳುವ ಮಂಜೂರಾತಿ ಪಡೆದು ಆ ಶಾಲೆ ಕಟ್ಟಡವನ್ನು ಕೆಡವಿ ಅದೇ ಕಲ್ಲು ಕಬ್ಬಿಣ, ಬಾಗಿಲು ಕಿಟಕಿಗಳನ್ನು ಉಪಯೋಗಿಸಿ ಅದೇ ಜಾಗೆಯಲ್ಲಿ ಕನ್ನಡ ಶಾಲೆಯ ಕಟ್ಟಡವನ್ನು ಕೂಡಲೇ ಕಟ್ಟಬೇಕು, ಮತ್ತು ಆ ಶಾಲೆಯನ್ನು ಹಾಗೆ ಉಪಯೋಗ ಬಿಟ್ಟಿದ್ದರಿಂದ (ಅದು ಉಪಯೋಗ ಬರುವುದಿಲ್ಲಾ) ಅಲ್ಲಿದ್ದ ಬಾಗಿಲು ಕಿಟಕಿ ಮತ್ತು ಬಾಗಿಲುಗಳು ಪಾಳುಗಾವಂತಿರುವುದಲ್ಲದೇ ತುಡುಗ ಸಹಾ ಆಗಿರುತ್ತದೆ. ಈಗ ಈ ಶಾಲೆಯು ಹತ್ತಿರ ಹೊಸದಾಗಿ ೭–೮ ಶಾಲೆಯ ಕೋಣೆಗಳನ್ನು ಕಟ್ಟಿದ್ದು ಅವು ಸಾಲುವಂತೆ ಇರುವುದಿಲ್ಲಾ. ಈ ಹಳೆಯ ಶಾಲೆಯ ಕಟ್ಟಡವನ್ನು ಕೆಡವಿ ಅದೇ ಜಾಗೆಯಲ್ಲಿ ಅದೇ ಪಾಯದ ಮೇಲೆ ಕಲ್ಲು, ಕಬ್ಬಿಣ ಕಟ್ಟಿಗೆ ಉಪಯೋಗಿಸಿ ಶಾಲೆಯ ಕಟ್ಟಡ ಕಟ್ಟುವುದರಿಂದ ಹೆಣ್ಣು ಮಕ್ಕಳಿಗೆ ಶಾಲೆಯ ಕಟ್ಟಡ ಕಟ್ಟಿದಂತೆ ಆಗುವುದಲ್ಲದೇ ಹಾಳಾಗಿ ಹೋಗುತ್ತಿರುವ ಕಟ್ಟಡದ ಸಾಮಾನುಗಳು ಸಹಾ ಉಪಯೋಗಿಸಿದಂತೆ ಆಗುತ್ತದೆ. ಇದರಿಂದ ಬಹಳೇ ಸ್ವಲ್ಪ ಖರ್ಚಿನಲ್ಲಿ ೮ ಕೋಟಿಗಳ ಶಾಲೆಯು ನಿರ್ಮಾಣವಾಗುವುದು.

ಈ ಹಳೆಯ ಶಾಲೆಯ ಕಟ್ಟಡ ಹತ್ತಿರ ಹೊಸ ಶಾಲೆಯ ಕಟ್ಟಡವನ್ನು ಕಟ್ಟಿದ್ದರಿಂದ ಹುಡುಗರು ಹಳೆಯ ಕಟ್ಟಡದಲ್ಲಿ ಆಡಲಿಕ್ಕೆ ಹೋಗುತ್ತಾರೆ. ಈ ಬಿಲ್ಡಿಂಗ್‌ದ ಸ್ಲ್ಯಾಬು ಮತ್ತು ಗೋಡೆಗಳು ಸೀಳಿರುವುದರಿಂದ (ಕ್ರ್ಯಾಕ್) ಯಾವುದೇ ಪ್ರಸಂಗದಲ್ಲಿ ಅನಾಹುತವಾಗುವ ಸಂಭವ ಇದೆ. ಆದಕಾರಣ ಕೂಡಲೇ ವಿಜಿಲೆನ್ಸ್‌ರವರ ಅಪ್ಪಣೆ ಪಡೆದು ಈ ಶಾಲೆಯು ಕೆಡವಿ ಅದೇ ಸಾಮಾನುಗಳಿಂದ ಶಾಲೆಯ ಬಿಲ್ಡಿಂಗ್ ಕಟ್ಟಲು ನಾನು ತಮ್ಮ ಮುಖಾಂತರ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್ (ನೀರಾವರಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ವಿವರಣೆಯನ್ನು ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.